# ತಾಯ್ತನದ ಭಾಗ್ಯಕ್ಕೆ ತಂತ್ರಜ್ಞಾನದ ನೆರವು

**ಮಗು ಬಯಸುವ ದಂಪತಿಗಳಿಗೆ ನಾನಾ ಕಾರಣಗಳಿಂದ ಸಹಜವಾಗಿ ಮಗು ಪಡೆಯುವುದು ಕಷ್ಟವಾಗುತ್ತಿದೆ. ಪತಿ–ಪತ್ನಿ ಇಬ್ಬರೂ ಐವಿಎಫ್ ಮೊರೆ ಹೋಗುವುದು ಅನಿವಾರ್ಯವಾಗುತ್ತಿದೆ. ಹಿಂದೆಂದಿಗಿಂತಲೂ ಇಂದು ಅತಿ ಹೆಚ್ಚಾಗಿ ದಂಪತಿಗಳನ್ನು ಸಂತಾನಹೀನತೆ ಕಾಡಲು ಕಾರಣಗಳಾದರೂ ಏನು?**

**ಉಮಾ ಅನಂತ್**

ಬೆಂಗಳೂರಿನ ಚೇತನಾಳಿಗೆ ವಯಸ್ಸು ಮೂವತ್ತು. ಮದುವೆಯಾಗಿ ಐದು ವರ್ಷಗಳಾಗಿವೆ. ದಂಪತಿಗಳಿಬ್ಬರೂ ಸಾಫ್ಟ್‌ವೇರ್ ಎಂಜಿನಿಯರ್. ಸಹಜವಾಗಿ ಮಗು ಪಡೆಯುವುದಕ್ಕಾಗಿ ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗಲೇ ಇಲ್ಲ. ಇಬ್ಬರೂ ಎಲ್ಲ ರೀತಿಯ ಪರೀಕ್ಷೆಗೊಳಪಟ್ಟರೂ ಮಗುವಾಗುವ ಸಾಧ್ಯತೆ ಮರೀಚಿಕೆಯೇ ಆಗಿತ್ತು. ಐವಿಎಫ್ ಚಿಕಿತ್ಸೆಯ ಮೊರೆ ಹೋದ ದಂಪತಿಗೆ ಆರೋಗ್ಯಪೂರ್ಣ ಹೆಣ್ಣು ಮಗು ಪ್ರಾಪ್ತವಾಯಿತು.

ಈಗೀಗ ಸಹಜವಾಗಿ ಮಕ್ಕಳಾಗುವ ಭಾಗ್ಯ ಎಲ್ಲರಿಗೂ ಸಿಗುತ್ತಿಲ್ಲ. ಅನೇಕ ಕಾರಣಗಳು ದಂಪತಿಗಳನ್ನು ಮಗುವಿಲ್ಲದೆ ಕೊರಗುವಂತೆ ಮಾಡುತ್ತಿದೆ. ಆಧುನಿಕ ಜೀವನಶೈಲಿ ಈ ಕೊರಗನ್ನು ಮತ್ತಷ್ಟು ಕರಾಳವಾಗಿಸಿದೆ ಎನ್ನುವುದು ವೈದ್ಯಲೋಕದ ಕಳವಳ. ಇದರ ಪರಿಣಾಮ ಹಲವು ದಂಪತಿಗಳು ಮಕ್ಕಳನ್ನು ಪಡೆಯುವುದಕ್ಕಾಗಿ ಐವಿಎಫ್ ಮೊರೆ ಹೋಗಬೇಕಾದ ಅನಿವಾರ್ಯ!

### ಸಂತಾನಹೀನತೆಗೆ ಕಾರಣಗಳೇನು?

- ಆಧುನಿಕ ಜೀವನಶೈಲಿ, ಅತಿವೇಗದ ನಗರೀಕರಣ, ಹಾರ್ಮೋನಿನ ಏರುಪೇರು, ಕೆಲಸದ ಒತ್ತಡ, ಬೊಜ್ಜು, ವಾಹನಗಳ ಹೊಗೆ ಮತ್ತು ಇತರ ಕಲುಷಿತ ವಾತಾವರಣ.
- ಪುರುಷರಲ್ಲಿ ಸಂತಾನಹೀನತೆ ಹೆಚ್ಚಾಗಲು ಕಾರಣ ಧೂಮಪಾನ, ಮಾದಕ ವಸ್ತುಗಳ ಸೇವನೆ, ಸ್ಟೀರಾಯ್ಡ್‌ಗಳ ಬಳಕೆ
- ತಡವಾಗಿ ಮದುವೆಯಾಗುವುದು, ಮಗು ಮಾಡಿಕೊಳ್ಳುವುದನ್ನು ಮುಂದೂಡುವುದು
- ಡಯಾಬಿಟಿಸ್, ಅತಿತೂಕ
- ಲ್ಯಾಪ್‌ಟಾಪ್, ಸ್ಮಾರ್ಟ್‌ಫೋನ್‌ಗಳಂತಹ ಗ್ಯಾಜೆಟ್‌ಗಳ ಅತಿ ಬಳಕೆ. ಬದಲಾದ ಆಹಾರದ ಪದ್ಧತಿ.

‘ಭಾರತದಲ್ಲಿ ಸಂತಾನಹೀನತೆ ಸಮಸ್ಯೆ ದಿನೇದಿನೇ ಉಲ್ಬಣಿಸುತ್ತಿದೆ. ಐವಿಎಫ್ ಚಿಕಿತ್ಸೆ ಪಡೆಯುತ್ತಿರುವ ದಂಪತಿಗಳ ಸಂಖ್ಯೆಯೂ ಗಣನೀಯವಾಗಿ ಹೆಚ್ಚುತ್ತಿದೆ. ಐವಿಎಫ್ (ಇನ್‌ವಿಟ್ರೋ ಫರ್ಟಿಲಿಟಿ ಸೆಂಟರ್) ಕೇಂದ್ರಗಳೂ ಹೆಚ್ಚುತ್ತಿವೆ. 1986ರಲ್ಲಿ ಭಾರತದಲ್ಲಿ ಮೊದಲ ಐವಿಎಫ್ ಕೇಂದ್ರ ಆರಂಭವಾಯಿತು. ಈಗ ದೇಶದಾದ್ಯಂತ ಎರಡು ಸಾವಿರಕ್ಕೂ ಹೆಚ್ಚು ಐವಿಎಫ್ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ’ ಎಂದು ವಿವರ ನೀಡುತ್ತಾರೆ ಬೆಂಗಳೂರಿನ ಬಸವೇಶ್ವರ ನಗರದಲ್ಲಿರುವ ನೋವಾ ಐವಿಎಫ್ ಕೇಂದ್ರದ ವೈದ್ಯಕೀಯ ನಿರ್ದೇಶಕಿ ಡಾ. ಅವಿವಾ ಪಿಂಟೊ ರಾಡ್ರಿಗಸ್.

ಒಂದು ಅಧ್ಯಯನದ ಪ್ರಕಾರ, ಭಾರತದಲ್ಲಿ 27.5 ದಶಲಕ್ಷ ದಂಪತಿಗಳು ಸಂತಾನಪ್ರಾಪ್ತಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಂದಾಜು ಶೇ. 15–20ರಷ್ಟು ದಂಪತಿ ಜೀವನಶೈಲಿ ಸಮಸ್ಯೆಯಿಂದ ಫಲವತ್ತತೆ ಕೊರತೆ ಅನುಭವಿಸುತ್ತಿದ್ದಾರೆ.

